ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು–560001**

ಸಂಖ್ಯೆ: ಸಿ7(2)ಪ್ರಾಶಿಅ/ರಾ.ಮ.ಹ.ರ.ಆ/ದೂರು/58/2019–20, ದಿನಾಂಕ:20–12–2019

**: : ಪರಿಷ್ಕೃತ ಸುತ್ತೋಲೆ : :**

ವಿಷಯ: **ರಾಜ್ಯದ ಅನುದಾನ ರಹಿತ ಖಾಸಗಿ ಶಾಲೆಗಳು ಮತ್ತು ಕೇಂದ್ರ ಪಠ್ಯ ಕ್ರಮ ಬೋದನೆ ಮಾಡುತ್ತಿರುವ ಶಾಲೆಗಳು ನಿರ್ಧಿಷ್ಟ ಮಾರಾಟಗಾರರ ಮೂಲಕ ಪುಸ್ತಕಗಳನ್ನು ಖರೀದಿಸುವಂತೆ ಒತ್ತಾಯ ಮಾಡುತ್ತಿರುವ ಬಗ್ಗೆ.**

ಉಲ್ಲೇಖ: 1.ರಾಷ್ಟ್ರಿಯ ಮಕ್ಕಳ ಹಕ್ಕುಗಳ ಆಯೋಗ ಇವರ ಪತ್ರ ಸಂಖ್ಯೆ.KT-84803/ 2017-18/ NCPCR/RTE ದಿನಾಂಕ 24-05-2019.

2. ರಾಜ್ಯ ಉಚ್ಚನ್ಯಾಯಾಲಯ ರಿಟ್ ಅರ್ಜಿ ಸಂಖ್ಯೆ 21375- 23180/2017 (EDN-RES) ತೀರ್ಪು ದಿನಾಂಕ 29 ಮೇ 2017.

3. ಕರ್ನಾಟಕ ಶಿಕ್ಷಣ ಕಾಯ್ದೆ ನಿಯಮಗಳು(Classification,Regulation and Prescription of Curricula ETC.,) Rules -1995

4. ರಾಜ್ಯ ಸರ್ಕಾರದ ಅಧಿಸೂಚನೆ ಇಡಿ 04 ಮಾಹಿತಿ.2017 ದಿ:03–03–2017

5. ಈ ಕಛೇರಿ ಸುತ್ತೋಲೆ ಸಂಖ್ಯೆ: ಸಿ7(8)ಆರ್.ಟಿ.ಇ/ಪ್ರ.ಪ್ರ/2017–18, ದಿ:02–05–2017.

6. ಸಿ.ಬಿ.ಎಸ್.ಇ ಅಫಿಲಿಯೇಷನ್ ಬೈ–ಲಾಸ್ 2018.

7. ಈ ಕಛೇರಿ ಸಮಪತ್ರದ ಸುತ್ತೋಲೆ ದಿನಾಂಕ:13–08–2019.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯದ ಖಾಸಗಿ ಅನುದಾನ ರಹಿತ ಶಾಲೆಗಳು ಶಾಲೆಗಳನ್ನು ನೊಂದಣಿ ಮತ್ತು ಅನುಮತಿ ಪಡೆಯುವಾಗ ಹಾಗೂ ಕೇಂದ್ರ ಪಠ್ಯಕ್ರಮ ಶಾಲೆಗೆ ಸಂಯೋಜನೆಗೆ ಪಡೆಯುವಾಗ ಇಲಾಖೆಯ ನಿಯಮಗಳಿಗೆ ಅನುಸರಿಸಬೇಕೆಂಬ ಷರತ್ತಿನ ಮೇರೆಗೆ ನೋಂದಣಿ / ಮಾನ್ಯತೆ / ನಿರಾಕ್ಷೇಪಣಾ ಪತ್ರ ನೀಡಲಾಗಿರುತ್ತದೆ.

ಆದರೂ ಇಲಾಖೆಯೂ ನೀಡಿರುವ ಆದೇಶಗಳನ್ನು ಪಾಲಿಸದೇ ಬಹುತೇಕ ಖಾಸಗಿ ಶಾಲೆಗಳಲ್ಲಿ ಪಠ್ಯಪುಸ್ತಕಗಳನ್ನು, ನೋಟ್ ಪುಸ್ತಕಗಳನ್ನು, ಸಮವಸ್ತ್ರಗಳನ್ನು ಹಾಗೂ ಇತರೆ ಲೇಖನ ಸಾಮಗ್ರಿಗಳನ್ನು ಶಾಲೆಗಳಲ್ಲಿ ಅಥವಾ ನಿರ್ಧಿಷ್ಟ ಮಾರಾಟಗಾರರಿಂದ ಖರೀದಿಸುವಂತೆ ವಿದ್ಯಾರ್ಥಿಗಳ ಪೋಷಕರುಗಳಿಗೆ ಒತ್ತಾಯಿಸುತ್ತಿರುವ ಬಗ್ಗೆ ಅನೇಕ ಪೋಷಕರ ದೂರುಗಳ ಹಿನ್ನೆಲೆಯಲ್ಲಿ ಉಲ್ಲೇಖ(4)ರ ಸರ್ಕಾರದ ಆದೇಶದಂತೆ ರಾಜ್ಯದ ಯಾವುದೇ ಖಾಸಗಿ ಶಾಲೆಯು ಪಠ್ಯಪುಸ್ತಕಗಳನ್ನು(ರಾಜ್ಯ ಪಠ್ಯಪುಸ್ತಕ ಹೊರತುಪಡಿಸಿ) ನೋಟ್ ಪುಸ್ತಕಗಳನ್ನು, ಸಮವಸ್ತ್ರಗಳನ್ನು ಮತ್ತು ಇತರೆ ಲೇಖನ ಸಾಮಗ್ರಿಗಳನ್ನು ನಿರ್ಧಿಷ್ಠ ಮಾರಾಟಗಾರರಿಂದ ಖರೀದಿಸುವಂತೆ ಪಾಲಕರಿಗೆ ಒತ್ತಾಯಿಸುವುದನ್ನು ಅಥವಾ ಅವುಗಳನ್ನು ಶಾಲೆಯಿಂದಲೇ ಪಡೆಯುವಂತೆ ಒತ್ತಾಯಿಸುವುದನ್ನು ನಿರ್ಬಂಧಿಸಿ ಆದೇಶಿಸಲಾಗಿದೆ. ಉಲ್ಲೇಖ(2)ರ ಮಾನ್ಯ ಉಚ್ಚ ನ್ಯಾಯಾಲಯವು

ದಿನಾಂಕ:29-05-2017 ರಲ್ಲೂ ನೀಡಿರುವ ತೀರ್ಪಿನಲ್ಲಿಯೂ ಸಹಾ "The Management of the educational Institutions clarifies that it cannot, and does not, prohibit any parent from the purchase of the books from any vendor" ಎಂದು ತಿಳಿಸಿರುತ್ತದೆ.

ಪ್ರತಿ ತರಗತಿಗೆ ನಿಗಧಿಪಡಿಸಿರುವಂತಹ ನೋಟ್ ಪುಸ್ತಕಗಳನ್ನು, ಸಮವಸ್ತ್ರಗಳನ್ನು ಮತ್ತು ಇತರೆ ಲೇಖನ ಸಾಮಗ್ರಿಗಳನ್ನು ಮುಕ್ತ ಮಾರುಕಟ್ಟೆಯಿಂದ ಖರೀದಿಸಲು ಪೋಷಕರು ಸ್ವತಂತ್ರರಾಗಿದ್ದು, ಈ ಬಗ್ಗೆ ಉಲ್ಲೇಖ(5)ರ ಈ ಕಛೇರಿಯ ಸುತ್ತೋಲೆಯಲ್ಲಿ ಸ್ಪಷ್ಟಪಡಿಸಲಾಗಿದೆ.

ಈಗಾಗಲೇ ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ಇಂತಹ ಕೆಲವು ಶಾಲಾ ಆಡಳಿತ ಮಂಡಳಿಗಳ ಮೇಲೇ ದೂರು ದಾಖಲಿಸಿರುತ್ತದೆ. ಆದ್ದರಿಂದ ಇನ್ನು ಮುಂದೆ ರಾಜ್ಯ ಪಠ್ಯಕ್ರಮ ಬೋಧಿಸುವ ಶಾಲೆಗಳು ಇಲಾಖೆಯು ನಿಗಧಿಪಡಿಸಿರುವ ಪಠ್ಯಕ್ರಮವನ್ನೇ ಬೋಧಿಸತಕ್ಕದ್ದು, ಕೇಂದ್ರ ಪಠ್ಯಕ್ರಮದ ಶಾಲೆಗಳು ಉಲ್ಲೇಖ(6)ರ ನಿಯಮ2.4.6ರಲ್ಲಿ ತಿಳಿಸಿರುವಂತೆ ಸಿಬಿಎಸ್ಇ / ಎನ್.ಸಿ.ಇ.ಆರ್.ಟಿ (ಕೇಂದ್ರ ಸಂಶೋಧನಾ ಮತ್ತು ಶಿಕ್ಷಣ ತರಬೇತಿ ಕೇಂದ್ರ) ನಿಗಧಿಡಿಪಸಿರುವ ಪಠ್ಯಕ್ರಮಗಳನ್ನೇ ಬೋಧಿಸುವುದು.

ಅನಧಿಕೃತ ಪಠ್ಯಕ್ರಮ ಬೋಧನೆಗೆ ಅವಕಾಶವನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಾಲೆಗಳಿಗೆ ಪರೋಕ್ಷವಾಗಿ ಸಹಕಾರ ನೀಡುತ್ತಿರುವುದನ್ನು ಸಹಾ ಕಡ್ಡಾಯವಾಗಿ ನಿಷೇಧಿಸಲಾಗಿದೆ. ಇನ್ನು ಮುಂದೆ ಇಂತಹ ದೂರುಗಳು ಬಂದಲ್ಲಿ ಆಯಾ ಶಾಲಾ ಆಡಳಿತ ಮಂಡಳಿ / ಮುಖ್ಯಸ್ಥರು ಹಾಗೂ ಸಂಬಂಧಿಸಿದ ಕ್ಷೇತ್ರಶಿಕ್ಷಣಾಧಿಕಾರಿಗಳ ಮೇಲೆ ನಿಯಮಾನುಸಾರ ಸೂಕ್ತ ಕ್ರಮವನ್ನು ಜರುಗಿಸಲಾಗುವುದು. ಈ ಕಛೇರಿಯ ದಿನಾಂಕ:13-08-2019ರ ಉಲ್ಲೇಖ(7)ರ ಸುತ್ತೋಲೆಯನ್ನು ಹಿಂಪಡೆದಿದ್ದು, ಪರಿಷ್ಕೃತ ಸುತ್ತೋಲೆಯಂತೆ ಕ್ರಮವಹಿಸಲು ಸೂಚಿಸಲಾಗಿದೆ.

ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ,

ಗೆ,

1. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು(ಆಡಳಿತ) ಇವರಿಗೆ ಸೂಕ್ತ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ತಾಲ್ಲೂಕು/ವಲಯಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ
3. ರಾಜ್ಯದ ಎಲ್ಲಾ ಖಾಸಗಿ ಅನುದಾನರಹಿತ ಶಾಲೆಗಳ ಆಡಳಿತ ಮಂಡಳಿಗಳು/ಮುಖ್ಯಸ್ಥರಿಗೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ ಸೂಕ್ತ ಕ್ರಮಕ್ಕಾಗಿ

ಪ್ರತಿಯನ್ನು:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ), ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು-01 ಇವರಿಗೆ ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ/ ಕಲಬುರಗಿ.
3. ನಿರ್ದೇಶಕರು(ಪ್ರೌಢ ಶಿಕ್ಷಣ), ಆಯುಕ್ತರ ಕಛೇರಿ, ಬೆಂಗಳೂರು ಇವರಿಗೆ ಮಾಹಿತಿಗಾಗಿ
4. ಇ-ಆಡಳಿತ ಶಾಖೆ, ಆಯುಕ್ತರ ಕಛೇರಿ, ಬೆಂಗಳೂರು ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದಕ್ಕಾಗಿ
5. ಕಛೇರಿ ಪ್ರತಿ.